ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ವಿಶೇಷ
ನ್ಯಾಯಾಧೀಶರ ನ್ಯಾಯಾಲಯ, ಹಾಸನ

ಸ್ಪೆಷಲ್ ಕೇಸ್ ನಂಃ **205/2023**

| | ಚಾಸಾಃ **9** | ಅಸಾಃ **9** |
|---|---|---|
| ಹೆಸರು | ಕೃಷ್ಣೇಗೌಡ | |
| ತಂದೆಯ ಹೆಸರು **:** | ನರಸಿಂಹೇಗೌಡ | |
| ವಯಸ್ಸು**:** | 65 ವರ್ಷ | |
| ಕೆಲಸಃ | ನಿವೃತ್ತ ಎ ಎಸ್ ಐ | |
| ವಾಸಸ್ಥಳ | ಹಾಸನ | |

ದಿನಾಂಕಃ **10/02/2026** ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಸ್‌ಪಿಪಿ ರವರಿಂದ

ನಾನು ದಿ. 17.07.2017 ರಿಂದ 2020 ರವರೆಗೆ ದುದ್ದ ಪೊಲೀಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ. 17.10.2019 ರಂದು ಸಂಜೆ 4.30 ಗಂಟೆಗೆ ಹಾಸನದ ಎಸ್ ಎಸ್ ಎಂ ಆಸ್ಪತ್ರೆಯಿಂದ ಕರೆ ಬಂದ ಮೇರೆಗೆ ಚಾಸಾ-1 ರವರು ಎಲೆಕ್ಟ್ರಿಷಿಯನ್ ಶಾಕಿನಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗೆ ಎಂಬ ಮೇರೆಗೆ ಚಾಸಾ-8 ರವರನ್ನು ಗಾಯಾಳುವನ್ನು ಹೇಳಿಕೆ ಪಡೆದುಕೊಂಡು ಬರಲು ಆಸ್ಪತ್ರೆಗೆ ಕಳುಹಿಸಿರುತ್ತೇನೆ. ಅವರು ಸಂಜೆ 7.00 ಗಂಟೆಗೆ ಬಂದು ಆಸ್ಪತ್ರೆಯ ಮೆಮೊ ಹಾಗೂ ಹೇಳಿಕೆಯನ್ನು ಕೊಟ್ಟಿರುತ್ತಾರೆ. ನಿಪಿ-1 ನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-7 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಅದನ್ನು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ನ್ಯಾಯಾಲಯಕ್ಕೆ ವರದಿ ಮಾಡಿರುತ್ತೇನ .

ದಿ. 18.10.2019 ರಂದು ಕೃತ್ಯ ಸ್ಥಳಕ್ಕೆ 8.30 ಕ್ಕೆ ಭೇಟಿ ನೀಡಿ ಚಾಸಾ-2 ಮತ್ತು 4 ರವರ ಸಮಕ್ಷಮ ಚಾಸಾ-2 ರವರು ಸ್ಥಳ ತೋರಿಸಿದ ಮೇರೆಗೆ ನಿಪಿ-2 ರಂತೆ ಮಹಜರ್ ಮಾಡಿರುತ್ತೇನೆ. ಸಾಕ್ಷಿ ನಿಪಿ-2 ರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು.

ಅದೇ ದಿನ ಯಾಂತ್ರಿಕ ದೋಷದಿಂದ ಅಪಘಾತ ಸಂಭವಿಸಿದೆಯೇ ಎಂದು ವಿದ್ಯುತ್ ಪರೀವೀಕ್ಷಕರಿಗೆ ಮನವಿ ಪತ್ರ ಕಳುಹಿಸಿರುತ್ತೇನೆ. ಆರೋಪಿತರಿಗೆ ತನಿಖೆ ಸಂಬಂಧ ಠಾಣೆಗೆ ಹಾಜರಾಗಲು ಸ.ಕಾ.ಅ ರವರಿಗೆ ಪತ್ರದ ಮೂಲಕ ಕೋರಿರುತ್ತೇನೆ.

ದಿ. 28.10.2019 ರಂದು ಗಾಯಾಳು ಚಿಕ್ಕೇಗೌಡ ಬಿನ್ ಮಲ್ಲಪ್ಪಗೌಡ ರವರ ಬಾಬ್ತು ಗಾಯದ ದೃಡೀಕರಣ ಪತ್ರವನ್ನು ಕಳುಹಿಸಿಕೊಡುವಂತೆ ಕೋರಿ ಎಸ್ ಎಸ್ ಎಂ ವೈದ್ಯಾಧಿಕಾರಿಯವರಿಗೆ ಮನವಿ ಕೋರಿರುತ್ತೇನೆ.

ದಿ. 27.11.2019 ರಂದು ಆರೋಪಿತರಿಗೆ ಠಾಣಾಗೆ ಹಾಜರಾದ ಮೇರೆಗೆ ಸಿ ಆರ್ ಪಿ ಸಿ 41(ಎ) ನೋಟೀಸ್ ಜಾರಿ ಮಾಡಿರುತ್ತೇನೆ. ಸಾಕ್ಷಿ ನೋಟೀಸನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-9 ಎಂದು ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿತರು ಗೈರು ಹಾಜರಿರುವುದರಿಂದ ಅವರ ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲವೆಂದು ತಿಳಿಸಿರುತ್ತಾರೆ.

ಅದೇ ದಿನ ವೈದ್ಯಾಧಿಕಾರಿಯವರು ಗಾಯಾಳುವಿನ ಗಾಯದ ಪ್ರಮಾಣ ಪತ್ರವನ್ನು ಕಳುಹಿಸಿದ್ದ ಮೇರೆಗೆ ಅದನ್ನು ಕಡತಕ್ಕೆ ಅಳವಡಿಸಿರುತ್ತೇನೆ. ಸಾಕ್ಷಿ ನಿಪಿ-5 ರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-5(ಬಿ) ಎಂದು ಗುರುತಿಸಲಾಯಿತು.

ದಿ. 27.02.2020 ರಂದು ಹಾಸನ ವಿದ್ಯುತ್ ಪರಿವೀಕ್ಷಕರು ವರದಿಯನ್ನು ಸ್ವೀಕರಿಸಿರುತ್ತೇನೆ. ಸಾಕ್ಷಿ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-10 ಎಂದು ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ಅದೇ ದಿನ ತನಿಖೆ ಪೂರೈಸಿ ದೋಷಾರೋಪಾಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಚಾಸಾ-2

ರವರು ನಿಪಿ3 ರಂತೆ ಚಾಸಾ-3 ರವರು ನಿಪಿ-4 ರಂತೆ ನನ್ನ ಮುಂದೆ ಹೇಳಿಕೆ ಕೊಟ್ಟಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

ಆರೋಪಿಯವರಿಗೆ ಕೊಟ್ಟ ದೋಷಾರೋಪಣಾ ಪಟ್ಟಿಯಲ್ಲಿರುವ ಪ್ರ.ವ.ವ 107/2023 ಪಿರ್ಯಾದಿದಾರರ ಹೆಸರು ಚಿಕ್ಕೇಗೌಡ ಎಂದು ಇರುತ್ತದೆ ಎಂದರೆ ಸರಿ. ಆರೋಪಿಯವರಿಗೆ ಕೊಟ್ಟಿರುವ ಪ್ರ.ವ.ವ ಪ್ರತಿ ಈ ಕೇಸಿಗೆ ಸಂಬಂಧಪಟ್ಟಿಲ್ಲ ಎಂದರೆ ಸರಿ.

ಮೆಮೊ ಹಾಗೂ ಹೇಳಿಕೆಯ ಆಧಾರದ ಮೇಲೆ ಪ್ರ.ವ.ವ ದಾಖಲು ಮಾಡಿರುತ್ತೇನೆ. ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿ ಪ್ರ.ವ.ವ ದಾಖಲು ಮಾಡಿಲ್ಲ. ಪೊಲೀಸ್ ಮ್ಯಾನ್ಯುಯಲ್ ಪ್ರಕಾರ ಸ್ಥಳದ ವಿದ್ಯಮಾನದ ತಿಳಿದು ಪ್ರ,ವ.ವ ದಾಖಲು ಮಾಡಬೇಕು ಎಂದು ಇರುತ್ತದೆ ಎಂದರೆ ಸರಿಯಲ್ಲ. ಆ ಅವಧಿಯಲ್ಲಿ ನನಗೆ ಪ.ವ.ವ. ದಾಖಲು ಮಾಡಲು ನನಗೆ ಅಧಿಕಾರವಿರಲಿಲ್ಲ ಎಂದರೆ ಸರಿಯಲ್ಲ. ಗಾಯಾಳು ಘಟನೆ ಬಗ್ಗೆ ನನ್ನ ಮುಂದೆ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿ.

ಠಾಣೆಯಿಂದ ಕೃತ್ಯ ನಡೆದ ಸ್ಥಳಕ್ಕೆ ಸುಮಾರು 12 ಕಿ.ಮೀ ಆಗುತ್ತದೆ. ಯಾವ ವಾಹನದಲ್ಲಿ ನಾನು ಸ್ಥಳಕ್ಕೆ ಹೋದೆ ಎಂದು ನಾನು ನಮೂದನೆ ಮಾಡಿಲ್ಲ. ನಾನು ಸ್ಥಳಕ್ಕೆ ಹೋದ ಸಮಯದಲ್ಲಿ ಯಾವುದೇ ವಸ್ತುವನ್ನು ಅಮಾನತುಪಡಿಸಿಕೊಂಡಿಲ್ಲ. ತುಂಡಾಗಿ ಬಿದ್ದಂತಹ ವೈರನ್ನು ನಾನು ಅಮಾನತುಪಡಿಸಿಕೊಂಡಿಲ್ಲ

ಮಹಜರ್ ಮಾಡಿದ ದಿನ ಚಾಸಾ-2 ರವರು ಸ್ಥಳದಲ್ಲಿರಲಿಲ್ಲ ಎಂದರೆ ಸರಿಯಲ್ಲ. ಮಹಜರ್ ಸಾಕ್ಷಿದಾರರಿಗೆ ಸ್ದಳಕ್ಕೆ ಬರಲು ನೋಟೀಸ್ ಕೊಟ್ಟಿಲ್ಲ. ಎಂದರೆ ಸರಿ. ಸಾಕ್ಷಿದಾರರು ಯಾರು ಆ ಗ್ರಾಮದವರಲ್ಲ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋಗಿ ಮಹಜರ್ ಮಾಡಿಲ್ಲ, ಠಾಣಯಲ್ಲಿ ಕುಳಿತು ಮಹಜರ್ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಗಾಯದ ಪ್ರಮಾಣ ಪತ್ರ ಈ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲಾತಿಯಲ್ಲ ಎಂದರೆ ಸರಿಯಲ್ಲ. ವಿದ್ಯುತ್

ಪರಿವೀಕ್ಷಕರು ಹಾಗೂ ನಮ್ಮ ಇಲಾಖೆಯವರು ಎರಡು ಅವಿಭಕ್ತ ಅಂಗಗಳು ಎಂದರೆ ಸರಿಯಲ್ಲ. ಸಾಕ್ಷಿದಾರರು ನನ್ನ ಮುಂದೆ ಹೇಳಿಕೆ ಕೊಡದೇ ಇದ್ದರೂ ನಾನು ಆರೋಪಿ ವಿರುದ್ದ ಸುಳ್ಳು ದೋಷಾರೋಪರಣಾ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಈ ಕೇಸಿಗೂ ಆರೋಪಿತರಿಗೂ ಯಾವುದಕೇ ಸಂಬಂಧವಿಲ್ಲದೇ ಇದ್ದರೂ ಸಹಾ ಇಲಾಖಾ ಅಂಕಿಅಂಶಕ್ಕೋಸ್ಕರ ಸುಳ್ಳು ದೋಷಾರೋಪಣಾ ಪತ್ರವನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಪ್ರ.,

ಅಪರ ಸೆಷನ್ಸ್ ಮತ್ತು ವಿಶೇಷ
ನ್ಯಾಯಾಧೀಶರು, ಹಾಸನ